**ದಿನಾಂಕ: 19.08.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಆರೋಪಿಯ ಪರ ವಕೀಲರಿಂದ:**

1. ನಾನು 7 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಟೈಲ್ಸ್ ಮತ್ತು ಗ್ರಾನೇಟ್ ಅಂಗಡಿ ಇರುತ್ತದೆ. ನನ್ನ ಅಂಗಡಿಯಿಂದ ತಿಂಗಳಿಗೆ ಎಷ್ಟು ಆದಾಯ ಬರುತ್ತದೆ? ಎಂದರೆ ಸುಮಾರು ರೂ. 60 ರಿಂದ 70 ಸಾವಿರ ಆದಾಯ ಬರುತ್ತದೆ. ಟೈಲ್ಸ್ ವ್ಯವಹಾರದ ದಾಖಲೆಗಳು ನನ್ನ ಮಗನ ಹೆಸರಿನಲ್ಲಿ ಇರುತ್ತವೆ. ಟೈಲ್ಸ್ ಬಿಸಿನೆಸ್ ನಾನು ಮಾಡುವುದಿಲ್ಲ, ನನ್ನ ಮಗ ಮಾಡುತ್ತಾನೆ ಎಂದರೆ ಸರಿ. ಆರೋಪಿಯು ನನಗೆ ಸುಮಾರು 20 ವರ್ಷಗಳಿಂದ ಸ್ನೇಹಿತನಿರುತ್ತಾನೆ. ಈ ಹಿಂದೆ ಕೂಡಾ ಆರೋಪಿಯು ನನ್ನ ಬಳಿ ಹಣ ಪಡೆಯುವುದು ಮತ್ತು ವಾಪಸ್ಸು ಮಾಡುವುದನ್ನು ಮಾಡುತ್ತಿದ್ದ ಎಂದರೆ ಸರಿ. ಅಂತಹ ಸಂದರ್ಭಗಳಲ್ಲಿ ಆರೋಪಿಯಿಂದ ಯಾವುದಾದರೂ ದಾಖಲೆಗಳನ್ನು ಪಡೆಯುತ್ತಿದ್ದಿರಾ? ಎಂದರೆ ಚೆಕ್ ಪಡೆದುಕೊಂಡು ಹಣ ವಾಪಸ್ಸು ಕೊಟ್ಟಾಗ ಚೆಕ್ ವಾಪಸ್ಸು ಕೊಡುತ್ತಿದ್ದೆ. ಆರೋಪಿ ಮಾತ್ರವಲ್ಲದೇ ನಾನು ಬೇರೆ ಬೇರೆಯವರಿಗೆ ಕೂಡಾ ಹಣ ಕೊಡುವುದು ಚೆಕ್ ಪಡೆಯುವುದು ಮಾಡಿದ್ದೇನೆ ಎಂದರೆ ಸರಿಯಲ್ಲ. ಟಿ. ಮಲ್ಲಿಕಾರ್ಜುನ ತಂದೆ ಕಟ್ಟೆಪ್ಪ ನನಗೆ ಗೊತ್ತು. ಟಿ. ಮಲ್ಲಿಕಾರ್ಜುನನಿಗೆ ಕೂಡಾ ನಾನು ಸಾಲ ಕೊಟ್ಟಿದ್ದೆ ಎಂದರೆ ಸರಿ. ಇದೇ ಕೋರ್ಟಿನಲ್ಲಿ ಅವರ ವಿರುದ್ಧ ಕೂಡಾ ಚೆಕ್ ಬೌನ್ಸ್ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿ. ಆದ್ದರಿಂದ, ನಾನು ಸಾಲ ಕೊಡುವ ವ್ಯವಹಾರ ಮಾಡುತ್ತಿದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಟಿ. ಮಲ್ಲಿಕಾರ್ಜುನ ಮತ್ತು ಆರೋಪಿ ಇಬ್ಬರೂ ಸ್ನೇಹಿತರು. ಆರೋಪಿಯೇ ಸದರಿ ಮಲ್ಲಿಕಾರ್ಜುನನಿಗೆ ನನ್ನಿಂದ ಸಾಲ ಕೊಡಿಸಿದ್ದ. ಅವರಿಬ್ಬರ ನಡುವೆ ಯಾವುದೇ ಸಂಬಂಧ ಇಲ್ಲದಿದ್ದರೂ ಆರೋಪಿಯೇ ಮಲ್ಲಿಕಾರ್ಜುನನಿಗೆ ಸಾಲ ಕೊಡಿಸಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಆರೋಪಿಯು ದಿನಾಂಕ 01.10.2024 ರಂದು ನನ್ನ ಮನೆಗೆ ಬಂದು ಆತನ ಟೈಲರಿಂಗ್ ವ್ಯವಹಾರಕ್ಕಾಗಿ ರೂ. ನಾಲ್ಕೂವರೆ ಲಕ್ಷ ಸಾಲ ಬೇಕೆಂದು ಕೇಳಿದ್ದ. ನನ್ನ ಬಳಿ ಹಣವಿರಲಿಲ್ಲ. ಆದರೆ, ಆರೋಪಿಯು ತನ್ನ ಹೆಂಡತಿಯ ಸಮೇತ ನಮ್ಮ ಮನೆಗೆ ಬಂದು ಸಾಲ ಕೇಳಿದ್ದರಿಂದ ನನ್ನ ಮಗನ ಕಡೆಯಿಂದ ಹಣ ಪಡೆದುಕೊಂಡು ಅದೇ ದಿನವೇ ಆರೋಪಿಗೆ ಸಾಲ ಕೊಟ್ಟಿದ್ದೆ. ಖಾಸಗಿ ದೂರಿನ 3 ನೇ ಪ್ಯಾರಾದಲ್ಲಿ ರೂ. 5,50,000/- ಎಂಬುದನ್ನು ತಿದ್ದುಪಡಿ ಮಾಡಿ ರೂ. 4,50,000/- ಮಾಡಲಾಗಿದೆ ಎಂದರೆ ಸರಿಯಲ್ಲ. ಅದೇ ಪ್ಯಾರಾದ 8 ನೇ ಸಾಲಿನಲ್ಲಿ ರೂ.6,50,000/- ನ್ನು ತಿದ್ದಿ ರೂ. 4,50,000/- ಎಂದು ಮಾಡಲಾಗಿದೆ ಎಂದರೆ ಅದನ್ನು ನಾನು ಮಾಡಿಲ್ಲ. ನಾನು ಎಲ್ಲಾ ರೂ. 500 ರ ಕರೆನ್ಸಿ ನೋಟುಗಳಲ್ಲಿ ಆರೋಪಿಗೆ ಹಣ ಕೊಟ್ಟಿದ್ದೆ. ಆ ಹಣವನ್ನು ನನ್ನ ಮಗನಿಂದ ಪಡೆದುಕೊಂಡು ಆರೋಪಿಗೆ ಕೊಟ್ಟಿದ್ದೆ. ಆರೋಪಿಯು ಬಟ್ಟೆ ವ್ಯಾಪಾರ ಮತ್ತು ಟೈಲರಿಂಗ್ ಮಾಡುತ್ತಾರೆ. ಆರೋಪಿಯು ನನಗೆ ಮುಂಚೆಯಿಂದಲೂ ಆತ್ಮೀಯ ಸ್ನೇಹಿತನಾಗಿದ್ದರಿಂದ ನಾನು ಆತನ ಬಟ್ಟೆ ವ್ಯಾಪಾರದ ಬಗ್ಗೆ ದಾಖಲೆಗಳನ್ನು ಕೇಳಲಿಲ್ಲ. ಆರೋಪಿಯು ಟೈಲರಿಂಗ್ ಮಾಡುವುದರಿಂದ ಆತನಿಗೆ ದೊಡ್ಡ ಮೊತ್ತವನ್ನು ಸಾಲವಾಗಿ ಕೊಟ್ಟರೆ ವಾಪಸ್ಸು ಮಾಡುತ್ತಾನೆಂಬ ಭರವಸೆ ಇಲ್ಲವೆಂದು ಸಾಲ ಕೊಡಲು ನಿರಾಕರಿಸಲಿಲ್ಲವೇ? ಎಂದರೆ ಆರೋಪಿಯು ನನಗೆ ಸ್ನೇಹಿತನಾಗಿದ್ದು ಆತ ಸಾಲವನ್ನು ವಾಪಸ್ಸು ಮಾಡುತ್ತೇನೆಂದು ಭರವಸೆ ಕೊಟ್ಟಿದ್ದರಿಂದ ವಿಶ್ವಾಸದ ಮೇಲೆ ಸಾಲ ಕೊಟ್ಟಿದ್ದೆ. ಆರೋಪಿಯು ಸಾಲವನ್ನು ಒಂದು ತಿಂಗಳ ಒಳಗಡೆ ವಾಪಸ್ಸು ಮಾಡುತ್ತೇನೆಂದು ಹೇಳಿದ್ದ. ಸಾಲ ಕೊಟ್ಟ ಒಂದು ತಿಂಗಳ ನಂತರ ನಾನು 3-4 ಬಾರಿ

ಆರೋಪಿಯನ್ನು ಸಾಲ ವಾಪಸ್ಸು ಕೇಳಿದ್ದೆ. ಆ ರೀತಿ ಸಾಲ ವಾಪಸ್ಸು ಕೇಳಲು ನಾನು ಒಬ್ಬನೇ ಹೋಗಿದ್ದೆ. ಆರೋಪಿಯು ದಿನಾಂಕ 19.11.2024 ರಂದು ಚೆಕ್ ಕೊಟ್ಟಿದ್ದ. ಅದು ಮಹೀಂದ್ರಾ ಕೊಟಕ್ ಬ್ಯಾಂಕಿನ ಚೆಕ್ ಆಗಿದ್ದು, ಅದರ ನಂಬರ್ ನನಗೆ ನೆನಪಿಲ್ಲ.

**(ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ಹಗರಿಬೊಮ್ಮನಹಳ್ಳಿ